ವಿಜಯವಾಣಿ
ಕನ್ನಡಿಗರ ಧ್ವನಿ

# ಇಂದಿನಿಂದ ಜೈನ್ ವಿವಿ ಕ್ರೀಡಾಕೂಟ

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯ ಫೆಬ್ರವರಿ 16 ರಿಂದ 19ರವರೆಗೆ 15ನೇ 'ವಿಐಇ-14' ಅಖಿಲ ಭಾರತ ಅಂತರ ಕಾಲೇಜು ಕ್ರೀಡಾಕೂಟ ಹಮ್ಮಿಕೊಂಡಿದೆ. ಶ್ರೀಲಂಕಾದ 2 ಕಾಲೇಜು ಸೇರಿದಂತೆ ದೇಶದ ಸುಮಾರು 50 ಕಾಲೇಜುಗಳಿಂದ 1200 ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಕ್ರಿಕೆಟ್ (ಆಹ್ವಾನಿತ), ಬಾಸ್ಕೆಟ್‌ಬಾಲ್ (ಪುರುಷರು/ಮಹಿಳೆಯರು), ಟೆನಿಸ್ (ಪುರುಷರು/ಮಹಿಳೆಯರು), ಟೇಬಲ್ ಟೆನಿಸ್ (ಪುರುಷರು/ಮಹಿಳೆಯರು), ಬ್ಯಾಡ್ಮಿಂಟನ್ (ಪುರುಷರು/ಮಹಿಳೆಯರು), ಈಜು (ಪುರುಷರು/ಮಹಿಳೆಯರು), ಹಾಕಿ (ಪುರುಷರು) ಹಾಗೂ ವಾಲಿಬಾಲ್ (ಪುರುಷರು) ಸ್ಪರ್ಧೆಗಳು ನಡೆಯಲಿವೆ. ಜಯನಗರದ ಕಾರ್ಪೊರೇಷನ್ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ 6.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಒಲಿಂಪಿಯನ್ ಹಾಗೂ ಅರ್ಜುನ ಪ್ರಶಸ್ತಿ ಪುರಸ್ಕೃತ ಅನೂಪ್ ಶ್ರೀಧರ್ ಕ್ರೀಡಾಕೂಟ ಉದ್ಘಾಟಿಸಲಿದ್ದಾರೆ. , ಜೈನ್ ವಿವಿ ಅಧ್ಯಕ್ಷ ಚೆನರಾಜ್ ಜೈನ್ ಅಧ್ಯಕ್ಷತೆ ವಹಿಸಲಿದ್ದಾರೆ. ಚೆನ್ನೈನ ಹಿಂದುಸ್ತಾನ್ ವಿವಿ, ಎಸ್‌ಆರ್‌ಎಂ ವಿವಿ, ಬಿಬಿ ಜೈನ್ ಕಾಲೇಜು, ಹಿಂದುಸ್ತಾನ್ ಕಲಾ ಮತ್ತು ವಿಜ್ಞಾನ ಕಾಲೇಜು, ಗುರುನಾನಕ್ ಕಾಲೇಜು, ಮಂಗಳೂರಿನ ಆಳ್ವಾಸ್, ಶ್ರೀಲಂಕಾದ ಇಸಿಪ್ಪೋನಾ ಕಾಲೇಜು, ಬೆಂಗಳೂರಿನ ಕ್ರೈಸ್ಟ್ ವಿವಿ, ಮೌಂಟ್ ಕಾರ್ಮೆಲ್ ಕಾಲೇಜು, ಜ್ಯೋತಿ ನಿವಾಸ್ ಕಾಲೇಜು, ಬಿಎಂಎಸ್ ಕಾಲೇಜುಗಳಿಂದ ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಸಂಪರ್ಕ: 9900115374